ಆ ಜನರ ಗುಂಪಿನಲ್ಲಿ ಗ್ರಾಮದ ಯಜಮಾನನೂ ಇದ್ದನು. ಅವನು ವಿವೇಕಾನಂದರನ್ನು ಸಮೀಪಿಸಿ ಅಡ್ಡಬಿದ್ದು, "ಮಹಾರಾಜ್, ನೀವು ಮಹಾತ್ಮರು, ನಮ್ಮ ಪುಣ್ಯವಶದಿಂದ ನಮ್ಮ ಹಳ್ಳಿಗೆ ಬಂದಿದ್ದೀರಿ. ಈತನನ್ನು ಬಹಳ ಕಾಲದಿಂದ ಕಾಡುತ್ತಿರುವ ದೆವ್ವವನ್ನು ನೀವು ಬಿಡಿಸಿಕೊಡಬೇಕು" ಎಂದು ವಿನಯದಿಂದ ಬೇಡಿಕೊಂಡನು. ವಿವೇಕಾನಂದರು ಕ್ಷಣಕಾಲ ಗಲಿಬಿಲಿಗೊಂಡರು. ಏನೊಂದೂ ತೋಚದೆ ಮೌನವಾಗಿ, ಭಾವಮಯರಾಗಿ ನಿಂತರು. ಆಗ ಗ್ರಾಮದ ಮಿಕ್ಕವರೂ ಸ್ವಾಮಿಗಳಿಗೆ ಅಡ್ಡಬಿದ್ದು, "ಬಿಡಿಸಿಕೊಡಿ ಮಹಾರಾಜ್" ಎಂದು ಅಂಗಲಾಚಿದರು.

ಅನ್ಯಮಾರ್ಗವಿಲ್ಲದೆ ವಿವೇಕಾನಂದರು ಮೆಲ್ಲಮೆಲ್ಲನೆ ಆ ಭೂತಬಡಿದವನ ಸಮೀಪಕ್ಕೆ ಹೋದರು. "ಇದೇನು ಸುಳ್ಳೋ ನಿಜವೋ, ಮೊದಲು ಕೊಡಲಿಯನ್ನು ಪರೀಕ್ಷಿಸೋಣ" ಎಂದು ಅದನ್ನು ಕೈಗೆತ್ತಿಕೊಂಡರು. ಅಷ್ಟುಹೊತ್ತಿಗೆ ಅದು ಕೆಂಪುಬಣ್ಣದಿಂದ ತನಗೆ ಸಹಜವಾದ ಕಪ್ಪುಬಣ್ಣಕ್ಕೆ ತಿರುಗಿತ್ತು. ಆದರೂ ಅದರ ಉಗ್ರವಾದ ಬಿಸಿಯಿಂದ ವಿವೇಕಾನಂದರ ಕೈ ಸುಟ್ಟುಹೋಯಿತು. ಅದರಿಂದುಂಟಾದ ಉರಿಯಿಂದ ವಿವೇಕಾನಂದರು ತತ್ತರಿಸಿಹೋದರು. "ಅದು ಹಾಗಿರಬಹುದು, ಇದು ಹೀಗಿರಬಹುದು" ಎಂಬ ತರ್ಕವಿತರ್ಕಗಳೆಲ್ಲ ಹಾರಿಹೋದವು. ತಮ್ಮ ಕೈ ಉರಿಯಿಂದ ಬೇಯುತ್ತಿದ್ದರೂ ಅದನ್ನು ತೋರಗೊಡದೆ, ಅದೇ ಕೈಯನ್ನು ಆ ದೆವ್ವಮೆಟ್ಟಿಕೊಂಡ ಮನುಷ್ಯನ ತಲೆಯ ಮೇಲಿಟ್ಟು ಸ್ವಲ್ಪಹೊತ್ತು ಏಕಾಗ್ರಚಿತ್ತರಾಗಿ ಜಪಮಾಡಿದರು. ಆಗ ವಿವೇಕಾನಂದರ ಏಕಾಗ್ರತೆ ಎಷ್ಟಿತ್ತೆಂದರೆ ಅವರ ಕೈಯುರಿ ಮರೆಯಾಗಿಬಿಟ್ಟಿತು. ಹತ್ತುನಿಮಿಷಗಳು ಕಳೆಯುವುದರಲ್ಲಿಯೇ ಭೂತಬಾಧೆಗೆ ತುತ್ತಾಗಿದ್ದ ಆ ಮನುಷ್ಯನು, ಭೂತಮುಕ್ತನಾಗಿ ಎಲ್ಲರಂತೆ ಚೆನ್ನಾಗಿಬಿಟ್ಟನು. ಮೇಲೆದ್ದು ಬಂದು ಸ್ವಾಮಿಗಳ ಕಾಲಿಗೆರಗಿದನು.

ಆ ಹೊತ್ತಿನಲ್ಲಿ ಗ್ರಾಮಮುಖಂಡನೇ ಆದಿಯಾಗಿ ಅವರೆಲ್ಲರೂ ವಿವೇಕಾನಂದರ ವಿಷಯದಲ್ಲಿ ತೋರಿಸಿದ ಭಕ್ತಿಗೌರವಗಳು ಅಪೂರ್ವವಾಗಿದ್ದವು. "ಭೂತೋಚ್ಚಾಟನೆ ಮಾಡಲೆಂದೇ ಭಗವಂತನು ಈ ಮಹಾಪುರುಷರನ್ನು ನಮ್ಮೂರಿಗೆ ಕಳುಹಿಸಿದ್ದಾನೆ" ಎಂದು ಕೊಂಡಾಡುತ್ತಾ ಎಲ್ಲರೂ ನಮಸ್ಕರಿಸಿದರು. ಅಷ್ಟೆಲ್ಲಾ ಆಗುವ ಹೊತ್ತಿಗೆ ನಡುರಾತ್ರಿಯಾಯಿತು. ವಿವೇಕಾನಂದರು ಆ ಗೃಹಸ್ಥನೊಡನೆ ಆತನ ಗುಡಿಸಿಲಿಗೆ ಬಂದು ಮಲಗಿದರು. ಕೈಯುರಿ ಒಂದುಕಡೆ, ಆ ಘಟನೆಯ ಒಳಹೊರಗುಗಳನ್ನು ಸ್ವಲ್ಪವೂ ಭೇದಿಸಲಾರದೆ ಹೋದೆನಲ್ಲಾ ಎಂಬ ತಳಮಳ ಮತ್ತೊಂದು ಕಡೆ. ಹೀಗಾಗಿ ಅವರಿಗೆ ಮಲಗಿದರೂ ಕಣ್ಣರೆಪ್ಪೆ ಕೂಡಲೇ ಇಲ್ಲ. ಗಣಗಣನೆ ಉರಿಯುತ್ತಿರುವ ಕೊಡಲಿಯಿಂದ ಮನುಷ್ಯ ದೇಹವನ್ನು ತಿವಿದರೂ ಅದು ಸುಟ್ಟುಹೋಗದಿರುವುದೆಂದರೇನು, ಅದು ಪ್ರಕೃತಿವಿರುದ್ಧವಲ್ಲವೇ ಎಂಬ ಪ್ರಶ್ನೆ ಕಾಡತೊಡಗಿತು. "ಇಂತಹ ವಿಚಿತ್ರ ಘಟನೆಗಳು ಭೂಲೋಕದಲ್ಲಾಗಲಿ, ಸ್ವರ್ಗಲೋಕದಲ್ಲಾಗಲಿ ಬೇಕಾದಷ್ಟಿರಬಹುದು. ಆದರೆ ನಮ್ಮ ಧರ್ಮಶಾಸ್ತ್ರಗ್ರಂಥಗಳು ತಮ್ಮ ಸ್ವಪ್ನದಲ್ಲಿಯೂ ಅಂಥವನ್ನು ಕಂಡಿರಲಾರವು" ಎಂಬ ಮಾತೊಂದು ವಿವೇಕಾನಂದರ ಮನದಲ್ಲಿ ಆಗ ಅನುರಣಿಸುತ್ತಿತ್ತು. ಈ ಘಟನೆಯ ರಹಸ್ಯವು ವಿವೇಕಾನಂದರಿಗೇ ಅರ್ಥವಾಗಲಿಲ್ಲವೆಂದ ಮೇಲೆ ನಾವು ಏನು ತಾನೆ ಅರ್ಥಮಾಡಿಕೊಂಡೇವು?

ಈ ಘಟನೆಯನ್ನು ಆಲಿಸಿದ ಬಳಿಕ ಶರತ್‌ಚಂದ್ರರು, "ಆಮೇಲೇನಾದರೂ ಈ ವಿಷಯದಲ್ಲಿ ಚಿಂತಿಸಿ ಇತ್ಯರ್ಥ ಮಾಡುವುದಕ್ಕೆ ತಮಗೆ ಸಾಧ್ಯವಾಯಿತೇ, ಮಹಾರಾಜ್" ಎಂದು ಕೇಳಿದರು. ಸ್ವಾಮಿಗಳು "ಇಲ್ಲ, ಸಾಧ್ಯವಾಗಲಿಲ್ಲ" ಎಂದು ಉತ್ತರಿಸಿದರು. ಈ ಸಂದರ್ಭದಲ್ಲಿ ಭೂತೋಚ್ಚಾಟನೆ ಮಾಡಿದ ವಿವೇಕಾನಂದರ ಸಿದ್ಧಿಯ ರಹಸ್ಯವನ್ನು ಮನಗಾಣಬೇಕಾಗಿದೆ. ಆದರೆ ಅಂತಹ ಸಿದ್ಧಿಗಳ ಕಡೆಗೆ ಅವರು ಗಮನಕೊಡಲಿಲ್ಲ ಎಂಬುದನ್ನೂ ಮನವರಿಕೆ ಮಾಡಿಕೊಳ್ಳಬೇಕಾಗಿದೆ.

"ಪರಮಹಂಸರು ಸಿದ್ಧಿಗಳನ್ನು ತುಂಬ ಹಳಿಯುತ್ತಿದ್ದರು. ಇವೆಲ್ಲವೂ ಶಕ್ತಿಗಳನ್ನು ತೋರಿಸುವುದರ ಕಡೆಗೆ ಮನಸ್ಸನ್ನು ಸೆಳೆದು ಪರಮಾತ್ಮ ತತ್ತ್ವವನ್ನು ಪಡೆಯುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತಿದ್ದರು. ಆದರೆ ಮನುಷ್ಯನ ಮನಸ್ಸು ಎಷ್ಟು ದುರ್ಬಲವಾದುದೆಂದರೆ, ಸಂಸಾರಿಗಳ ಮಾತಿರಲಿ, ಸಾಧುಗಳಲ್ಲಿಯೂ ಶೇಕಡಾ ತೊಂಬತ್ತರಷ್ಟು ಜನರು ಸಿದ್ಧಿಯ ಉಪಾಸಕರಾಗಿ ಪರಿಣಮಿಸುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿಯೂ ಈ ವಿಧವಾದ ಇಂದ್ರಜಾಲವನ್ನು ನೋಡಿದರೆ ಜನರು ಬೆರಗಾಗುತ್ತಾರೆ. ಸಿದ್ಧಿಗಳನ್ನು ಪಡೆಯುವುದು ಹೇಯವಾದುದು, ಧರ್ಮಮಾರ್ಗಕ್ಕೆ ವಿಘ್ನಕಾರಿ ಎಂಬ ವಿಷಯವನ್ನು ಪರಮಹಂಸರು ಕೃಪೆಮಾಡಿ ತಿಳಿಸಿಕೊಟ್ಟು ಹೋಗಿರುವುದರಿಂದ ಅದು ನನಗೆ ಗೊತ್ತಿದೆ. ಹೀಗಾಗಿ ಪರಮಹಂಸರ ಶಿಷ್ಯರಾರೂ ಈ ಸಿದ್ಧಿಯ ವಿಷಯದಲ್ಲಿ ಆಸೆಯಿಟ್ಟುಕೊಂಡಿಲ್ಲ" ಎಂದು ಈ ವೃತ್ತಾಂತದ ಕೊನೆಯಲ್ಲಿ ಬೋಧಿಸಿದ್ದಾರೆ.

ಅಷ್ಟುಮಾತ್ರವಲ್ಲದೆ, ಇದೇ ಸಂದರ್ಭದಲ್ಲಿ, "ಮನುಷ್ಯರಿಗೆ ಅದ್ಭುತ ಶಕ್ತಿಗಳು ದೊರಕುವುದೂ ಒಂದು ಅಪಾಯವೆ. ಸಿದ್ಧಿಗಳನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕೆಂಬುದು ಅನೇಕರಿಗೆ ತಿಳಿದಿರುವುದಿಲ್ಲ. ಆ ಸಿದ್ಧಿ ತನಗೆ ಹೇಗೆ ಬಂತು ಎಂಬುದನ್ನು ಅರಿಯದ ಮನುಷ್ಯನಿಗೆ ಅದನ್ನು ರಕ್ಷಿಸಿಕೊಳ್ಳುವ ಸಿದ್ಧತೆಯೂ ಇರುವುದಿಲ್ಲ. ಆಗ ಅಂತಹ ಸಿದ್ಧಿಗಳು ಅಜ್ಞರಾದ ಅವರಿಗೆ ಬೇಕಾದಷ್ಟು ಸಂಕಟಗಳನ್ನೇ ತಂದೊಡ್ಡುತ್ತವೆ" ಎಂಬುದಾಗಿಯೂ ಎಚ್ಚರಿಕೆ ನೀಡಿದ್ದಾರೆ.

**ಸಿದ್ಧಿಯನ್ನು ನಾವು ಅನಿಷ್ಟದಂತೆ ತ್ಯಜಿಸಬೇಕು. ಸಾಧನೆ, ಸಂಯಮ ಅಥವಾ ಇಂದ್ರಿಯನಿಗ್ರಹದ ಪರಿಣಾಮವಾಗಿ ಇವು ತಾವಾಗಿಯೇ ಬರುವುವು. ಆದರೆ ಯಾರು ಇಂತಹ ಸಿದ್ಧಿಗಳಲ್ಲಿ ಆಸಕ್ತರಾಗಿರುತ್ತಾರೆಯೋ, ಅವರು ಅಲ್ಲಿಯೇ ನಿಂತುಕೊಳ್ಳಬೇಕಾಗುವುದು. ಮುಂದೆ ಹೋಗಲು ಸಾಧ್ಯವಿಲ್ಲ.**

– ಶ್ರೀರಾಮಕೃಷ್ಣ





# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ. ಆರ್. ಮೋಹನ್

## ಛಾಯಾಚಿತ್ರ ೬೧, ೬೨

ಸೋದರಿ ಗಾರ್ಗಿ (ಮೇರಿ ಲೂಯಿಸ್ ಬರ್ಕ್) ಅವರು ಸ್ವಾಮಿ ವಿವೇಕಾನಂದರ ಅಮೆರಿಕಾ ಭೇಟಿಯ ವಿಸ್ತೃತ ಪರಿಚಯವನ್ನು ತಮ್ಮ ಗ್ರಂಥಗಳ ಮೂಲಕ ಮಾಡಿಕೊಟ್ಟಿದ್ದಾರೆ. ಅವರ ಪ್ರಕಾರ, ಸ್ವಾಮೀಜಿಯವರ ಹಿಂದಿನ ಮೂರು ಚಿತ್ರಗಳಂತೆಯೇ ಇನ್ನೂ ನಾಲ್ಕು ಫೋಟೋಗಳನ್ನು ಸ್ಯಾನ್‌ಫ್ರಾನ್ಸಿಸ್ಕೋದ ಬುಶ್‌ನೆಲ್ ಸ್ಟುಡಿಯೋದಲ್ಲಿ ತೆಗೆಯಲಾಯಿತು. ಇವೆಲ್ಲ ಕುಳಿತ ಭಂಗಿಯಲ್ಲಿಯೇ ಇವೆ. ಹಾಗೂ ಸ್ವಾಮೀಜಿ ಕ್ರಾಪ್ ಬಿಟ್ಟಿದ್ದಾರೆ. ಇದಲ್ಲದೆ, ಸುಂದರವಾಗಿ ಕೆತ್ತಲ್ಪಟ್ಟ ಕುರ್ಚಿಯಲ್ಲಿ ಅವರು ಕುಳಿತಿದ್ದಾರೆ. ಈ ಫೋಟೋಗಳಲ್ಲಿ ಇರುವ ಅವರ ವೇಷಭೂಷಣವೂ ವಿಶಿಷ್ಟವಾಗಿದೆ. ಪಾದ್ರಿಗಳು ಧರಿಸುವ ಒಳಕತ್ತಿನ ಪಟ್ಟಿ ಹಾಗೂ ಸಡಿಲವಾಗಿರುವ ಕೋಟು



ಛಾಯಾಚಿತ್ರ ೬೧



ಛಾಯಾಚಿತ್ರ ೬೨

ಮತ್ತು ಪ್ಯಾಂಟ್‌ಗಳನ್ನು ಅವರು ಧರಿಸಿದ್ದಾರೆ. ಇವೆಲ್ಲ ಚಿತ್ರಗಳಲ್ಲಿ ಅವರ ಮುಖ ಕಣ್ಣುಸೆಳೆಯುವ ಮನಮೋಹಕ ಕಾಂತಿಯಿಂದ ಕೂಡಿದೆ. ಸ್ಯಾನ್‌ಫ್ರಾನ್ಸಿಸ್ಕೋದಲ್ಲಿ ಸ್ವಾಮೀಜಿಯವರ ಆಪ್ತ ಕಾರ್ಯದರ್ಶಿಯಾಗಿದ್ದ ಅವರ ಶಿಷ್ಯೆ ಮಿಸೆಸ್ ಹ್ಯಾನ್ಸ್‌ಬ್ರೋ ಎನ್ನುವವಳಿಗೆ ಸ್ವಾಮೀಜಿ ಹೀಗೆ ಹೇಳುತ್ತಾರೆ:

"ಜಗನ್ಮಾತೆ ನನ್ನನ್ನು ಒಂದು ವಿಚಿತ್ರ ಜಗತ್ತಿನಲ್ಲಿ ಎತ್ತಿ ಹಾಕಿದ್ದಾಳೆ. ಇಲ್ಲಿಯವರನ್ನು ನಾನು ಅರ್ಥಮಾಡಿಕೊಳ್ಳಲಾರೆ. ನನ್ನನ್ನು ಅವರು ಅರ್ಥಮಾಡಿಕೊಳ್ಳಲಾರರು ಎಂಬಂತಿದೆ. ಆದರೆ ನಾನು ಇಲ್ಲಿ ಹೆಚ್ಚುಹೆಚ್ಚು ಕಾಲ ಇದ್ದಂತೆ ನನಗೊಂದು ಭಾವನೆ ಬರುತ್ತಿದೆ. ನಾನು ಸಂಧಿಸಿದ ಈ ಜನಗಳೆಲ್ಲ ನನಗೆ ಸೇರಿದವರೇ ಮತ್ತು ನನ್ನ ಪಾಲಿನ ಕರ್ತವ್ಯದಲ್ಲಿ ಪಾಲ್ಗೊಳ್ಳಬೇಕೆಂದು ಇಲ್ಲಿಗೆ ಬಂದಿದ್ದಾರೆ."

ಮೇಲಿನ ಚಿತ್ರಗಳಲ್ಲಿ ಸ್ವಾಮೀಜಿಯವರ ಮಂದಹಾಸ ಮೋಡಿ ಮಾಡುವಂತಿದೆ.